ಎಂ ಸಿ  ನಂಬರ:- 44/2025

ಪಿ.ಡಬ್ಲೂ -:-1 : ಶಿವಯ್ಯ ತಂದೆ ಶಂಕರಯ್ಯ ಹಿರೆಮಠ

ದಿನಾಂಕ:- 22-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು : ಶ್ರೀ   ಎಸ್ ಜಿ ಹೆಚ್ ವಕೀಲರಿಂದ.

ನನ್ನ ಹೆಂಡತಿಯನ್ನು ಕರೆದುಕೊಂಡು ಬಂದರೂ ಸಹ ನಾನು ಇರುವುದಿಲ್ಲ ಎಂದು ಹೇಳಿ ಹೋಗಿದ್ದರಿಂದ ನಾನು ಈ ಅರ್ಜಿಯನ್ನು ಹಾಕಿರುತ್ತೇನೆ. ನನ್ನ ಮದುವೆಯಲ್ಲಿ ನನಗೆ ೨ ತೊಲೆ ಬಂಗಾರ ಹಾಕಿರುತ್ತಾರೆ ಎಂದರೆ ಸರಿ. ನನಗೆ ೩೦ ಸಾವಿರ ರೂಪಾಯಿ ಹಣ ಕೂಡಾ ಮದುವೆಯಲ್ಲಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಕೇವಲ ೨೦ ಸಾವಿರ ರೂಪಾಯಿ ನೀಡಿರುತ್ತಾರೆ ಎನ್ನುತ್ತಾರೆ. ನನಗೆ ಸುಮಾರು ೫೦ ಸಾವಿರ ರೂಪಾಯಿ ಸಾಮಾನುಗಳನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಅದರ ಬೆಲೆ ನನಗೆ ಗೊತ್ತಿಲ್ಲ ಆದರೆ ಅಲಮೆರಾ, ಕಾಟ್ ಮತ್ತು ಬಾಂಡೆ ಸಾಮಾನುಗಳನ್ನು ನೀಡಿರುತ್ತಾರೆ ಎನ್ನುತ್ತಾರೆ. ನನಗೆ ಹಿರೋ ಹೋಂಡಾ ಸ್ಪ್ಲೆಂಡರ್ ಮೋಟಾರ್ ಸೈಕಲ್ ಕೂಡಾ ನೀಡಿರುತ್ತಾರೆ ಎಂದರೆ ಸಾಕ್ಷಿಯು ನಾನು ೯ ಸಾವಿರ ರೂಪಾಯಿ ಮತ್ತು ನನ್ನ ಹೆಂಡತಿಯ ಮನೆಯವರು ೯ ಸಾವಿರ ರೂಪಾಯಿ ಹಾಕಿ, ಸೆಕೆಂಡ್ ಹ್ಯಾಂಡ್ ಮೋಟಾರ್ ಸೈಕಲನ್ನು ಖರೀದಿಸಿರುತ್ತೇನೆ ಎನ್ನುತ್ತಾರೆ. ನಾನು ಮೊದಲ ಸಲ ನನ್ನ ಹೆಂಡತಿಯ ಮನೆಗೆ ಹೋದಾಗ ನನಗೆ ಅರ್ಧ ತೊಲೆ ಬಂಗಾರ ಹಾಕಿರುತ್ತಾರೆ ಎಂದರೆ ಸರಿ. ಸಾಕ್ಷಿಯು ನನಗೆ ನೀಡಿದ ೨ ವರೆ ತೊಲೆ ಬಂಗಾರವನ್ನು ನನ್ನ ಹೆಂಡತಿಗೆ ನೀಡಿರುತ್ತೇನೆ ಎನ್ನುತ್ತಾರೆ.

೨.    ನಾನು ನನ್ನ ಹೆಂಡತಿಗೆ ೫೦ ಸಾವಿರ ರೂಪಾಯಿ ಮತ್ತು ೨ ತೊಲೆ ಬಂಗಾರ ತರುವಂತೆ ಮದುವೆಯಾದ ಮೇಲೆ ಮತ್ತೆ ಒತ್ತಾಯಿಸಿದ್ದೆ ಎಂದರೆ ಸರಿಯಲ್ಲ. ಅದನ್ನು ನೀಡಲು ಆಗುವುದಿಲ್ಲ ಎಂದು ನನ್ನ ಹೆಂಡತಿ ಹೇಳಿದ ನಂತರ ನಾನು ನನ್ನ ಹೆಂಡತಿಗೆ ಹೊಡೆ-ಬಡೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ತವರು ಮನೆಗೆ ಹೋಗಿ ૨ ವರ್ಷ ಆಗಿರುತ್ತದೆ. ನನ್ನ ಹೆಂಡತಿಗೆ ಮದುವೆಯಾದ ೫-೬ ತಿಂಗಳ ನಂತರ ಹಣ ಮತ್ತು ಬಂಗಾರ ತರುವಂತೆ ಕಿರುಕುಳ ನೀಡಿರುತ್ತೇವೆ ಎಂದರೆ ಸರಿಯಲ್ಲ. ૨ ವರ್ಷಗಳ ಅವಧಿಯಲ್ಲಿ ನಾವು ಸಾಕಷ್ಟು ಬಾರಿ ಪಂಚಾಯಿತಿ ಮಾಡಿದರೂ ಸಹ ನನ್ನ ಹೆಂಡತಿ ನನ್ನ ಜೊತೆ ಬಂದು ಜೀವನ ಮಾಡಿರುವುದಿಲ್ಲ.

೩.    ನಾನು ೨ನೇ ಮದುವೆ ಆಗಿರುವುದಿಲ್ಲ. ನನ್ನ ಹೆಂಡತಿಯ ಮನೆಯವರು ನೀಡಿದ ಬಂಗಾರ ನನ್ನ ಹೆಂಡತಿಯ ಕೊರಳಲ್ಲಿಯೆ ಇರುತ್ತದೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚಾಯಿತಿ ಮಾಡಿದಾಗ ಶ್ರೀಮಂತ ಅಂಜುಟಗಿ, ಸಂಜು ಉಕಲಿರವರು ಇದ್ದರು. ಸಂಜು ಉಕಲಿರವರಿಗೆ ಸುಮಾರು ೪೦ ವರ್ಷ ಮತ್ತು ಶ್ರೀಮಂತರವರಿಗೆ ಸುಮಾರು ೫೦ ವರ್ಷ ವಯಸ್ಸು ಇರುತ್ತದೆ. ನನ್ನ ಹೆಂಡತಿಯನ್ನು ಕರೆಯಲು ನ್ಯಾಯ ಮಾಡಿದವರು ೨-೩ ಬಾರಿ ಹೋಗಿದ್ದರು. ಅವರ ಜೊತೆ ನಮ್ಮ ತಂದೆ ಕೂಡಾ ಹೋಗಿದ್ದರು. ನಾನು ನನ್ನ ಹೆಂಡತಿಯ ಹಣ ಮತ್ತು ಬಂಗಾರ ಮುಳುಗಿಸಿ, ಬೇರೆ ಮದುವೆ ಆಗಿ ಅವರಿಂದ ಮತ್ತೆ ಹಣ ಬಂಗಾರ ಪಡೆಯುವ ಉದ್ದೇಶದಿಂದ ಒಂದು ಸುಳ್ಳು ಕೇಸನ್ನು ಹಾಕಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಅರ್ಜಿಯನ್ನು ಹಾಕಲು ಯಾವುದೆ ಕಾರಣ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.